CIVIL SERVICES (MAIN) EXAM-2022

CRNA-F-KND

ಕನ್ನಡ / KANNADA

ಪತ್ರಿಕೆ I / Paper I

(ಸಾಹಿತ್ಯ) / (LITERATURE)

ವೇಳೆ : **ಮೂರು** ಗಂಟೆ *Time Allowed : **Three** Hours*	ಗರಿಷ್ಠ ಅಂಕಗಳು : **250** *Maximum Marks : **250***

ಪ್ರಶ್ನೆ ಪತ್ರಿಕೆ ವಿಶೇಷ ಸೂಚನೆಗಳು

ದಯವಿಟ್ಟು ಪ್ರಶ್ನೆಗಳಿಗೆ ಉತ್ತರಿಸುವ ಮೊದಲು ಕೆಳಗಿನ ಪ್ರತಿಯೊಂದು ಸೂಚನೆಗಳನ್ನು ಸರಿಯಾಗಿ ಓದಿರಿ :

ಇದರಲ್ಲಿ **ಎಂಟು** ಪ್ರಶ್ನೆಗಳಿದ್ದು **ಎರಡು ಭಾಗಗಳಲ್ಲಿ** ವಿಂಗಡಿಸಲಾಗಿದೆ.

ಅಭ್ಯರ್ಥಿಗಳು ಎಲ್ಲಾ ಪ್ರಶ್ನೆಗಳಲ್ಲಿ **ಐದು** ಪ್ರಶ್ನೆಗಳಿಗೆ ಉತ್ತರಿಸಬೇಕು.

ಅಭ್ಯರ್ಥಿಗಳು ಪ್ರಶ್ನೆಗಳ ಸಂಖ್ಯೆ ***1*** ಮತ್ತು ***5*** ಕ್ಕೆ ಉತ್ತರಿಸುವುದು ಕಡ್ಡಾಯ, ಮತ್ತು ಇನ್ನುಳಿದ **ಮೂರು** ಪ್ರಶ್ನೆಗಳಲ್ಲಿ ಪ್ರತಿಯೊಂದು ವಿಭಾಗದಿಂದ ಕನಿಷ್ಠ **ಒಂದು** ಪ್ರಶ್ನೆಗಾದರೂ ಉತ್ತರಿಸಬೇಕು.

ಪ್ರತಿಯೊಂದು ಪ್ರಶ್ನೆಗಳಿಗಿರುವ ಅಂಕಗಳನ್ನು ಆಯಾ ಪ್ರಶ್ನೆಗಳ ಮುಂದೆಯೇ ನಮೂದಿಸಲಾಗಿದೆ.

ಉತ್ತರಗಳನ್ನು ಅತ್ಯಗತ್ಯವಾಗಿ ***ಕನ್ನಡದಲ್ಲೇ (ಕನ್ನಡ ಲಿಪಿಯಲ್ಲೇ)*** ಬರೆಯಬೇಕು.

ಕೆಲವು ಪ್ರಶ್ನೆಗಳಿಗೆ ಉತ್ತರಿಸಲು ನಿರ್ದಿಷ್ಟಪಡಿಸಿದ ಶಬ್ದಗಳ ಮಿತಿಯನ್ನು ಸರಿಯಾಗಿ ಪಾಲಿಸಬೇಕು.

ಉತ್ತರಿಸಿದ ಪ್ರಶ್ನೆಗಳನ್ನು ಕ್ರಮಬದ್ಧವಾಗಿ ಪರಿಗಣಿಸಿ ಎಣಿಕೆ ಮಾಡಲಾಗುವುದು. ಅಪೂರ್ಣ ಉತ್ತರಗಳನ್ನು ಹೊಡೆದು ಹಾಕದಿದ್ದಲ್ಲಿ ಅವುಗಳನ್ನು ಎಣಿಕೆಯಲ್ಲಿ ಪರಿಗಣಿಸಲಾಗುತ್ತದೆ. ಪ್ರಶ್ನೋತ್ತರ ಸಹಿತವಾಗಿರುವ ಪುಸ್ತಿಕೆಯಲ್ಲಿ ಬರೆಯದೆ ಉಳಿದ ಪೂರ್ಣ ಖಾಲಿ ಪುಟಗಳನ್ನು ಮತ್ತು ಭಾಗಶಃ ಖಾಲಿ ಇರುವ ಪುಟಗಳನ್ನು ಸ್ಪಷ್ಟವಾಗಿ ಹೊಡೆದು ಹಾಕಬೇಕು.

Question Paper Specific Instructions

Please read each of the following instructions carefully before attempting questions :

*There are **EIGHT** questions divided in **TWO SECTIONS**.*

*Candidate has to attempt **FIVE** questions in all.*

*Questions no. **1** and **5** are compulsory and out of the remaining, any **THREE** are to be attempted choosing at least **ONE** question from each section.*

The number of marks carried by a question / part is indicated against it.

*Answers must be written in **KANNADA (Kannada script)**.*

Word limit in questions, wherever specified, should be adhered to.

Attempts of questions shall be counted in sequential order. Unless struck off, attempt of a question shall be counted even if attempted partly. Any page or portion of the page left blank in the Question-cum-Answer Booklet must be clearly struck off.

Optional Province · optionalprovince.com

SECTION A

Q1. ಕೆಳಗೆ ಕೊಟ್ಟಿರುವ ವಿಷಯಗಳನ್ನು ಕುರಿತು ಟಿಪ್ಪಣಿ ಬರೆಯಿರಿ. ಪ್ರತಿಯೊಂದು ಟಿಪ್ಪಣಿ 150 ಪದಗಳಿಗೆ ಮೀರದಂತೆ ಇರಬೇಕು. ಪ್ರತಿ ಉಪಪ್ರಶ್ನೆಗೆ 10 ಅಂಕಗಳು. *10×5=50*

(a) ಕನ್ನಡ ಭಾಷೆಯ ಪ್ರಾಚೀನತೆ ಮತ್ತು ಅದು ಬೆಳೆದುಬಂದ ವಿವಿಧ ಹಂತಗಳು. *10*

(b) ವಿಕ್ರಮಾರ್ಜುನ ವಿಜಯದ ಕರ್ಣನ ಪಾತ್ರ ಚಿತ್ರಣ. *10*

(c) 'ಚೆನ್ನಮಲ್ಲಿಕಾರ್ಜುನ' ನೊಂದಿಗಿನ ಅಕ್ಕಮಹಾದೇವಿಯ ಭಕ್ತಿಯ ಸ್ವರೂಪ. *10*

(d) ಹರಿಹರನ ಶಿವ ಭಕ್ತಿಯ ಸ್ವರೂಪ. *10*

(e) ಕನಕದಾಸರ ಕೀರ್ತನೆಗಳಲ್ಲಿ ಕಂಡುಬರುವ ಧಾಂಬಿಕತೆ ಮತ್ತು ಸಾಮಾಜಿಕ ವಿಷಮತೆಗಳು. *10*

Q2. (a) ಆಧುನಿಕ ಕನ್ನಡ ಸಾಹಿತ್ಯದ ವಿವಿಧ ಪ್ರಕಾರಗಳನ್ನು ವಿವರಿಸಿ. *20*

(b) ನಾಗಚಂದ್ರನು ತನ್ನ ಪಂಪರಾಮಾಯಣ ಕಾವ್ಯದಲ್ಲಿ ರಾವಣನ ಪಾತ್ರವನ್ನು ಹೇಗೆ ಉದಾತ್ತೀಕರಿಸಿದ್ದಾನೆ ವಿವರಿಸಿ. *20*

(c) ಯಶೋಧರ ಚರಿತೆಯಲ್ಲಿ ಪ್ರತಿಪಾದಿತವಾಗಿರುವ ಜೈನಧರ್ಮದ ತಾತ್ವಿಕತೆಯನ್ನು ವಿವರಿಸಿ. *10*

Q3. (a) ಕನ್ನಡದ ಉಪಭಾಷೆಗಳನ್ನು ವಿವರಿಸಿ. *20*

(b) ರನ್ನ ಕವಿಯ ದುರ್ಯೋಧನನ ಪಾತ್ರವನ್ನು ವಿವರಿಸಿ. *20*

(c) ವಚನಗಳಲ್ಲಿ ವ್ಯಕ್ತವಾಗಿರುವ ಸಾಮಾಜಿಕ ಚಿಂತನೆ ಇಂದಿಗೂ ಹೇಗೆ ಪ್ರಸ್ತುತವಾಗಿದೆ ? ನಿರೂಪಿಸಿ. *10*

Q4. (a) 'ಭರತೇಶ ವೈಭವ'ದ ಭರತೇಶ ಮತ್ತು ಕುಸುಮಾಂಜಲಿಯರ ಪಾತ್ರಗಳನ್ನು ವಿಶ್ಲೇಷಿಸಿ. *20*

(b) ಕನ್ನಡ ನವೋದಯ ಸಾಹಿತ್ಯದ ಮೇಲಿನ ಪ್ರಭಾವ ಮತ್ತು ಪ್ರೇರಣೆಗಳನ್ನು ಕುರಿತು ಚರ್ಚಿಸಿ. *20*

(c) ದಲಿತ–ಬಂಡಾಯ ಸಾಹಿತ್ಯದ ಆಶಯವನ್ನು ವಿವರಿಸಿ. *10*

Optional Province · optionalprovince.com

SECTION B

Q5. ಕೆಳಗೆ ಕೊಟ್ಟಿರುವ ವಿಷಯಗಳನ್ನು ಕುರಿತು ಟಿಪ್ಪಣಿ ಬರೆಯಿರಿ. ಪ್ರತಿಯೊಂದು ಟಿಪ್ಪಣಿ 150 ಪದಗಳಿಗೆ ಮೀರದಂತೆ ಇರಬೇಕು. ಪ್ರತಿ ಉಪಪ್ರಶ್ನೆಗೆ 10 ಅಂಕಗಳು. *10×5=50*

(a) ವಸಾಹತೋತ್ತರ ವಿಮರ್ಶೆಯ ವಿಧಾನ *10*

(b) ಧ್ವನಿ ಕಾವ್ಯದ ಆತ್ಮ – ಈ ಹೇಳಿಕೆಯನ್ನು ವಿವರಿಸಿ *10*

(c) ಹೊಯ್ಸಳರ ಕಾಲದ ವಾಸ್ತುಶಿಲ್ಪ *10*

(d) ಮಧ್ಯಕಾಲೀನ ಕನ್ನಡ ಸಾಹಿತ್ಯ ಮತ್ತು ಧರ್ಮ *10*

(e) ಕನ್ನಡ ನವ್ಯ ಕಾವ್ಯದ ಭಾಷೆಯ ಸ್ವರೂಪವನ್ನು ವಿವೇಚಿಸಿ *10*

Q6. (a) ಭರತನ ರಸ ಸಿದ್ಧಾಂತವನ್ನು ವಿವರಿಸಿ. *20*

(b) ಕನ್ನಡ ಸಾಹಿತ್ಯ–ಸಂಸ್ಕೃತಿಗೆ ವಿಜಯನಗರ ಸಾಮ್ರಾಜ್ಯದ ಕೊಡುಗೆ. *20*

(c) ಚಾರಿತ್ರಿಕ ವಿಮರ್ಶೆಯ ಸ್ವರೂಪವನ್ನು ತಿಳಿಸಿ. *10*

Q7. (a) 'ರೀತಿಯೇ ಕಾವ್ಯದ ಆತ್ಮ' ಅಲಂಕಾರಿಕನ ಈ ಮಾತನ್ನು ವಿವರಿಸಿ. *20*

(b) ಭಾರತೀಯ ವಾಸ್ತು ಶಿಲ್ಪಕ್ಕೆ ಹೊಯ್ಸಳರ ಕೊಡುಗೆ. *20*

(c) ಪ್ರಗತಿಶೀಲ ಸಾಹಿತ್ಯದಲ್ಲಿ ಸಣ್ಣ ಕಥೆಗಳ ವಸ್ತುವನ್ನು ವಿಶ್ಲೇಷಿಸಿ. *10*

Q8. (a) ಕರ್ನಾಟಕದ ರಾಜವಂಶಗಳ ಕಾಲದ ಆಡಳಿತ ಭಾಷೆಯ ಸ್ವರೂಪವನ್ನು ಕುರಿತು ಬರೆಯಿರಿ. *20*

(b) ಕನ್ನಡ ಸಾಹಿತ್ಯದಲ್ಲಿ ಸ್ತ್ರೀವಾದಿ ವಿಮರ್ಶೆಯು ಬೆಳೆದು ಬಂದ ಹಾದಿಯನ್ನು ವಿವರಿಸಿ. *20*

(c) ಕರ್ನಾಟಕದ ಏಕೀಕರಣವನ್ನು ಕುರಿತು ಬರೆಯಿರಿ. *10*

Optional Province · optionalprovince.com